ಕಂಡಕ್ಟರ್ ರಹಿತ ಬಸ್‌ಗಳಲ್ಲಿ ಕಂಡಕ್ಟರ್‌ಗಳನ್ನು ನೇಮಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 25(391)

ಸದಸ್ಯರ ಹೆಸರು ಶ್ರೀ ಜಯಪ್ರಕಾಶ ಹೆಗ್ಡೆ(ಬ್ರಹ್ಮವರ)

ಉತ್ತರಿಸಬೇಕಾದ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಗರ ಸಾರಿಗೆ ಮತ್ತು ದೂರ ಪ್ರಯಾಣದ ಕೆಲವು ಬಸ್‌ಗಳಲ್ಲಿ ಕಂಡಕ್ಟರ್ ರಹಿತ ಪದ್ಧತಿಯಿಂದಾಗಿ ಅಪಘಾತಗಳು ಮತ್ತು ವಿಳಂಬವು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ! ಬಂದಿದ್ದಲ್ಲಿ ಆ ಕುರಿತು ಜರುಗಿಸಿದ ಕ್ರಮಗಳೇನು?

ಆ) ಲಾಭದಾಯಕವಲ್ಲದ ಆ ವದ್ಧತಿಯನ್ನು ರದ್ದುಪಡಿಸಿ ಕಂಡಕ್ಟರ್‌ಗಳನ್ನು ನೇಮಕ ಮಾಡಿ ಪ್ರಯಾಣಿಕರ ಸುರಕ್ಷತೆ ಮತ್ತು ಸುವ್ಯವಸ್ಥೆಗೆ ಅನುಕೂಲ ಮಾಡಿಕೊಡಲು ಸರಕಾರ ಕ್ರಮ ಕೈಗೊಳ್ಳುವುದೇ?

ಉತ್ತರ

ಅ) ಈ ರೀತಿಯ ವ್ಯವಸ್ಥೆಯಿಂದ ಅವಘಾತಗಳು ಮತ್ತು ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಮೇಲೆ ಹೇಳಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಔರಾದ್ ನಗರಕ್ಕೆ ಬಸ್ ನಿಲ್ದಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 26(464)

ಸದಸ್ಯರ ಹೆಸರು ಶ್ರೀ ಗುಂಡಪ್ಪ ವಕೀಲ್(ಔರಾದ್)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಔರಾದ್ ನಗರದಲ್ಲಿ ಬಸ್ ಡಿಪೋ ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಮಂಜೂರಾತಿ ನೀಡಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಯಿತು, ನೀಡಿದ ದಿನಾಂಕವನ್ನು ತಿಳಿಸುವುದು?

ಇ) ಈ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಹಣವೆಷ್ಟು, ಯಾವ ಯಾವ ಮೂಲದಿಂದ ಬಂದಿದೆ, ಬಸ್ ಡಿಪೋಕ್ಕೆ ಅಗತ್ಯವಾದ ಭೂಮಿ ಸಿದ್ದವಾಗಿದೆಯೇ?

ಈ) ಹಾಗಿದ್ದಲ್ಲಿ ಇದುವರೆಗೆ ಕಾಮಗಾರಿ ಕೆಲಸವನ್ನು ಪ್ರಾರಂಭಿಸದಿರಲು ಕಾರಣವೇನು?

ಉ) ಈಗಾಗಲೇ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ ನಿಗದಿವಡಿಸಿ ಮುಂದೂಡಿರುವ ಸಂಗತಿ ನಿಜವೇ, ಯಾವಾಗ ಕಾಮಗಾರಿ ಪ್ರಾರಂಭಿನಲಾಗುವುದು, ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

ಉತ್ತರ

ಅ) ಹೌದು

ಆ) ದಿನಾಂಕ 24-11-2000ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದೆ

ಇ) ಈ ಕಾಮಗಾರಿಗಾಗಿ ಒಟ್ಟು 86 94 ಲಕ್ಷ ರೂಗಳ ಅಂದಾಜು ಪಟ್ಟಿ ಸಿದ್ದಪಡಿಸಲಾಗಿದೆ ಇದರ ಪೈಕಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ 50 00 ಲಕ್ಷ ರೂಪಾಯಿಗಳನ್ನು ನೀಡುವ ಭರವಸೆ ನೀಡಲಾಗಿದೆ ಉಳಿದ ಹಣವನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಭರಿಸಲಾಗುವುದು ಬಸ್ ಡಿಪೋಗೆ ಅಗತ್ಯವಾದ ಭೂಮಿ ಸಂಸ್ಥೆಯ ವಶದಲ್ಲಿದೆ

ಈ) ಈ ಕಾಮಗಾರಿಗಾಗಿ ಟೆಂಡರ್, ಕರೆಯಲಾಗಿದೆ, ಟೆಂಡರ್‌ಗಳನ್ನು ಅಂತಿಮಗೊಳಿಸಿ ಕೆಲಸವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು

ಉ) ಇಲ್ಲಿ ಈ ಕಾಮಗಾರಿಗಾಗಿ ಅಡಿಗಲ್ಲು ಸಮಾರಂಭವನ್ನು ದಿನಾಂಕ 20-08-1993ರಂದು ನೆರವೇರಿಸಲಾಯಿತು ಕಾಮಗಾರಿಯನ್ನು ಮಾರ್ಚ್ 2002ರಲ್ಲಿ ಪ್ರಾರಂಭಿಸಿ ಸಪ್ಟಂಬರ್ 2003ರಂದು ಪೂರ್ಣಗೊಳಿಸುವ ಗುರಿ ಇದೆ